ಅನುಮತಿ ನಾವು ಕೊಟ್ಟಿದ್ದೇವೆ. ಕೆಲಸ ಪ್ರಾರಂಭ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಕೊಳವೆ ಬಾವಿಗಳು ಬೇಕಾಗಿದೆ ಅಂಥ ಜಾಗದಲ್ಲಿ ಕೊಳವೆ ಬಾವಿಗಳನ್ನು ತೆಗೆಸುವುದಕ್ಕೆ ನಾವು ಕೆಲಸ ಮಾಡುತ್ತೇವೆ. ಆದರೆ ಸಾಂಡ್ಸಾರವರು ಒಂದು ವಿಚಾರ ತಿಳಿದುಕೊಳ್ಳಬೇಕು. ಪ್ರತಿಯೊಂದು ವಿಚಾರಕ್ಕೂ ಬರೀ ಸರ್ಕಾರದವರು ಮಾತ್ರ ಮಾಡಿದರೆ ಆಗುವುದಿಲ್ಲ. ಕಾರ್ಪೊರೇಷನ್‌ನವರೂ ದುಡ್ಡು ಕೊಡಬೇಕಾಗುತ್ತದೆ. ಆಗ ಮಾತ್ರ ಈ ನೀರಿನ ಬವಣೆ ಎದುರಿಸಲಿಕ್ಕೆ ಸಾಧ್ಯ. ಆದ್ದರಿಂದ ದಯವಿಟ್ಟು ತಾವು ತಮ್ಮ ಪ್ರಭಾವ ಉಪಯೋಗಿಸಿ ಕಾರ್ಪೊರೇಷನ್ನಿನವರು ತಮ್ಮ ಪಾಲಿನ ಹಣವನ್ನು ಆದಷ್ಟು ಜಾಗ್ರತೆ ಕೊಡುವುದಕ್ಕೆ ತಾವು ವಿನಂತಿ ಮಾಡಿಕೊಳ್ಳಬೇಕು.

ನಿಯಮ 334 ರ ಮೇರೆಗೆ ಚರ್ಚೆ

ವಿಷಯ :– (1) ಸೀಮೆ ಎಣ್ಣೆ ಮತ್ತು ಡೀಸಲ್ ಕೊರತೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ) :– ಇತ್ತೀಚೆಗೆ ಎಲ್ಲಿಡೆಗಳಿಂದಲೂ ಕೊರತೆಗಳ ಕುರಿತಾದ ದೂರುಗಳ ಸರಮಾಲೆ. ಇದಕ್ಕೆ ಕಾರಣ ಜನ ಅನುಭವಿಸುತ್ತಿರುವ ಕಷ್ಟ ಕೋಟಲೆ. ಮೊನು ಹಿಡಿಯಲು ಉಪಯೋಗಿಸುವ ಯಾಂತ್ರಿಕ ದೋಣಿಗಳಿಗೆ ಡೀಸಲ್ಲಿನ ಕೊರತೆ. ರೈತರ ಪಂಪುಸೆಟ್ಟು ಪವರ್ ಟಿಲ್ಲರುಗಳಿಗೆ ಸೀಮೆ ಎಣ್ಣೆ ಡೀಸಲ್ ಕೊರತೆ; ಆಟೋರಿಕ್ಷಾ ಟ್ಯಾಕ್ಸಿ, ಬಸ್ಸು, ಲಾರಿಗಳಿಗೆ ಬೇಕಾದ ಇಂಧನ ತೈಲದ ಕೊರತೆ. ವಿದ್ಯುತ್ತಿನ ಕಡಿತ, ಅಡುಗೆ ಅನಿಲದ ಕೊರತೆ, ಗ್ರಾಮೀಣ ಪ್ರದೇಶದಲ್ಲಿ ಬರುವ ಕಾರ್ಡುದಾರರಿಗೆ ಮತ್ತಷ್ಟು ಸೀಮೆ ಎಣ್ಣೆಯಲ್ಲಿ ಕಡಿತ. ಬೇಗ ಸಂಘಟಿತರಾಗಿರುವ, ಎಚ್ಚೆತ್ತು ಕೂಗುವ ನಗರದ ನಾಗರೀಕರಿಗೂ ಗ್ರಾಮಾಂತರ ಪ್ರದೇಶದ ಗ್ರಾಪಕರಿಗೂ ಪೂರೈಕೆಯಲ್ಲಿ ಏಕೆ ತಾರತಮ್ಯ ? ಅವರೇನು ಎರಡನೇ ದರ್ಜೆ ಪ್ರಜೆಗಳೇ ? ಹಳ್ಳಿಗಳಲ್ಲಿ ವಿದ್ಯುತ್ ಪೂರೈಕೆ ಸಮರ್ಪಕವಾಗಿಲ್ಲ. ಆದರಲ್ಲೂ ಆಗಾಗ ಕಡಿತ. ಅಡುಗೆ ಅನಿಲವಂತೂ ಹಳ್ಳಿಗಳಿಗೆ ಇಲ್ಲವೇ ಇಲ್ಲ. ಈಗೀಗ ಉರುವಲು ಕೂಡ ದೊರಕದೇ ಬಡವರ ಬದುಕಿಗೆ ಉರುಳಾಗುವ ಪರಿಸ್ಥಿತಿ. ಬರೇ ನಾಲ್ಕು ಲೀಟರು ಸೀಮೆ ಎಣ್ಣೆ ಪಡೆದು ಹಳ್ಳಿಯಲ್ಲಿ ಒಲೆ ಉರಿಸುವ ಹೆಣ್ಣು ಮಕ್ಕಳಿಗೆ ಎದುರಾಗಿದೆ. ಎಲ್ಲ ದಿಕ್ಕಿನಲ್ಲಿ ಕೊರಳು ಕೊಯ್ಯುವ ಕೊರತೆ. ಇದರಿಂದಾಗಿ ನಿತ್ಯ ಕಣ್ಣೀರಿನ ಒರತೆ. ಈ ಕೊರತೆ ನೀಗಿಸಲು ಸರ್ಕಾರಕ್ಕೆ ಜನರೆಲ್ಲರ ಕಳಕಳಿಯ ಒತ್ತಾಯ. ಇದರ ಪರವಾಗಿ ನನ್ನದು ಕೊರತೆ ಇಲ್ಲದ ಒತ್ತಾಯ

ಶ್ರೀ ಟಿ. ಎನ್. ನರಸಿಂಹಮೂರ್ತಿ :– ತಾವೇ ಉತ್ತರ ಹೇಳುತ್ತೀರಾ ಸಾರ್ ಇದಕ್ಕೆ ?

ಅಧ್ಯಕ್ಷರು :– ಇಲ್ಲ. ಅವರ ಸೂಚನೆ ಬಹಳ ಕಾವ್ಯಮಯವಾಗಿದೆ.

I am impressed with that.

† ಶ್ರೀ ಟಿ. ಎನ್. ನರಸಿಂಹಮೂರ್ತಿ :– ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಶ್ರೀಮತಿ ಮನೋರಮ ಮಧ್ವರಾಜ್ ಅವರು ಅವರದೇ ಆದ ಸಾಹಿತ್ಯ ರೂಪದಲ್ಲಿ ತಮ್ಮ ಕ್ಷೇತ್ರದ ಸಮಸ್ಯೆಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದು, ಈ ಬಗ್ಗೆ ರಾಜ್ಯ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಿಜಕ್ಕೂ ಕೂಡ ಅವರು ಪ್ರಸ್ತಾಪ ಮಾಡಿರತಕ್ಕದ್ದು ಬಹಳ ಪ್ರಾಮುಖ್ಯವಾದ ವಿಷಯವಾಗಿದ್ದು, ಈ ಬಗ್ಗೆ ನಾನು ಸರ್ಕಾರದ ಉತ್ತರವನ್ನು ಹೇಳುವಾಗ ಇಡೀ ಸದನ ಇದನ್ನು ಗಮನಿಸುತ್ತದೆಂದು ನಾನು ಹೇಳುತ್ತೇನೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ಸರ್ಕಾರ ಸಿದ್ಧಪಡಿಸಿರುವ ಹೇಳಿಕೆಯನ್ನು ನಾನು ಈಗ ಇಲ್ಲಿ ಓದಿ ಸದನದ ಗಮನವನ್ನು ಸೆಳೆಯಬಯಸುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೇ,

ನಮ್ಮ ರಾಜ್ಯದ ಪಡಿತರ ಪ್ರದೇಶ ಮತ್ತು ಪಡಿತರೇತರ ಪ್ರದೇಶಗಳಲ್ಲಿ ಪಡಿತರ ಚೀಟಿ ಹೊಂದಿರುವವರಿಗೆ ಅವರವರ ಅವಶ್ಯಕತೆ, ಉರುವಲು ಸೌಲಭ್ಯ ಇತ್ಯಾದಿಗಳನ್ನು ಪರಿಶೀಲಿಸಿ ಆಪರಿಗೆ ಸಾಕಷ್ಟು ಸೀಮೆ ಎಣ್ಣೆಯನ್ನು ಒದಗಿಸಬೇಕಾದರೆ ಒಟ್ಟು 66,175 ಕೆ. ಎಲ್. ಸೀಮೆಎಣ್ಣೆ ಬೇಕಾಗುತ್ತದೆ. ಆದರೆ ಕೇಂದ್ರ ಸರ್ಕಾರವು ನಮ್ಮ ರಾಜ್ಯಕ್ಕೆ ನೀಡುತ್ತಿರುವ ಹಂಚಿಕೆ ಕೇವಲ 45,795 ಕೆ. ಎಲ್. ಆಗಿರುತ್ತದೆ. ಇದರಿಂದಾಗಿ ಕಾರ್ಯಭಾರ ಬೇಡಿಕೆಯನ್ನು ಸಂಪೂರ್ಣವಾಗಿ ಈಡೇರಿಸಲು ಆಗುತ್ತಿರಲಿಲ್ಲ. ಸೀಮೆ ಎಣ್ಣೆ ಪ್ರಮಾಣವನ್ನು ಹೆಚ್ಚಿಸಲು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ಕೆಮಿಕಲ್ಸ್, ಮಂತ್ರಾಲಯವನ್ನು ಕೋರಲಾಗಿದ್ದು ವಿದೇಶಿ ವಿನಿಮಯದ ಮಿತಿಯಿಂದಾಗಿ ಹೆಚ್ಚಿಸಲಾಗುತ್ತಿಲ್ಲವೆಂದು ಉತ್ತರ ಬಂದಿದೆ. ಆದಾಗ್ಯೂ ಸದರಿ ಕೋರಿಕೆಯನ್ನು ಪರಿಶೀಲಿಸಿ ನವೆಂಬರ್ ತಿಂಗಳಿನಲ್ಲಿ ಹೆಚ್ಚುವರಿ ಮಾಡಿ 52,940 ಕೆ. ಎಲ್. ಸೀಮೆಎಣ್ಣೆಯನ್ನು ಕೇಂದ್ರ ಸರ್ಕಾರ ಒದಗಿಸಿದೆ.

ಈಗಿರುವ ಹಂಚಿಕೆಯ ಪ್ರಮಾಣವನ್ನು ಅನುಸರಿಸಿ, ಪಡಿತರ ಚೀಟಿದಾರರ ಅವಶ್ಯಕತೆ, ಅವರು ವಾಸಿಸುವ ಪ್ರದೇಶ ಹಾಗೂ ಅವರಿಗಿರುವ ಉರುವಲು ಸೌಲಭ್ಯಗಳನ್ನು ಪರಿಗಣಿಸಿ ಸೀಮೆಎಣ್ಣೆಯನ್ನು ನಿಗದಿತ ಪ್ರಮಾಣದಲ್ಲಿ ವಿತರಿಸಲಾಗುತ್ತಿದೆ. ವಿವರ ಕೆಳಗಿನಂತಿದೆ :–

1) (ಅ) ಬೆಂಗಳೂರು ಪಡಿತರ ಪ್ರದೇಶದಲ್ಲಿ ಗ್ಯಾಸ್ ಹೊಂದಿರುವ ಕಾರ್ಡುದಾರರಿಗೆ —2 ಲೀಟರ್ ಪ್ರತಿ ತಿಂಗಳಿಗೆ.

(ಆ) ಗ್ಯಾಸ್ ಇಲ್ಲದೇ ಎ. ಇ. ಹೆಚ್. ಸೌಲಭ್ಯ ಹೊಂದಿರುವವರಿಗೆ —3 ಲೀಟರ್ ಪ್ರತಿ ತಿಂಗಳಿಗೆ.

(ಇ) ಗ್ಯಾಸ್ ಮತ್ತು ಎ. ಇ. ಹೆಚ್. ಇಲ್ಲದವರಿಗೆ — 12 ಲೀಟರ್ ಪ್ರತಿ ತಿಂಗಳಿಗೆ.

2) ಇತರ ನಗರ ಪ್ರದೇಶಗಳಲ್ಲಿ ಪ್ರತಿ ತಿಂಗಳಿಗೆ 8 ಲೀಟರ್.

3) ಇತರ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ತಿಂಗಳಿಗೆ 4 ಲೀಟರ್.

ಡೀಸಲ್ ಹಂಚಿಕೆ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರದವರು ದಿನಾಂಕ 1–11–90 ರಂದ ವಿಧಿಸಿದ್ದ ಶೇ. 10 ರ ಡೀಸಲ್ ಹಂಚಿಕೆಯ ಕಡಿತವನ್ನು ಇತ್ತೀಚೆಗೆ ಹಿಂತೆಗೆದುಕೊಂಡಿರುತ್ತಾರೆ. ಇದರಿಂದ ಡಿಸೆಂಬರ್ 1990 ರ ಮಾಹೆಗೆ ಸುಮಾರು 16,000 ಕೆ. ಎಲ್. ಡೀಸಲ್‌ನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿರುತ್ತಾರೆ. ಇದರಿಂದ ಡೀಸಲ್‌ನ ಅಭಾವ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಇದರ ಜೊತೆಗೆ ಸರ್ಕಾರದ ಮಟ್ಟದಲ್ಲಿ ಕಾರ್ಖಾನೆಗಳಿಗೆ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಿಂದ ಧೃಡೀಕರಣ ಪತ್ರ ಪಡೆದ ನಂತರ ಅಂತಹವುಗಳಿಗೆ ಡೀಸಲ್ ಪರವಾನಗಿಯನ್ನು ನೀಡುವಂತೆಯೂ ಮತ್ತು ಅಗತ್ಯ ವಸ್ತುಗಳ ಸಾಗಾಣಿಕೆ ಜಲಮಂಡಳಿ, ಆಸ್ಪತ್ರೆಗಳು, ನರ್ಸಿಂಗ್ ಹೋಂ ಇತ್ಯಾದಿ ಅಗತ್ಯ ಸೇವೆಗಳು ಇರುವಲ್ಲಿ ರೈತರಿಗೆ ಅವಶ್ಯವಾಗಿ ವ್ಯವಸಾಯಕ್ಕೆ ಮತ್ತು ಕಬ್ಬನ್ನು ಸಕ್ಕರೆ ಕಾರ್ಖಾನೆಗಳಿಗೆ ಸಾಗಣೆ ಮಾಡಲು ಡೀಸಲ್ ಪರವಾನಗಿ ನೀಡಿ ಒದಗಿಸುವಂತೆ ಆಹಾರ ಇಲಾಖೆಯ ನಿರ್ದೇಶಕರು ಹಾಗೂ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಮೀನು ಹಿಡಿಯುವ ಯಾಂತ್ರಿಕ ದೋಣಿಗಳಿಗೆ ಡೀಸಲ್ ಕಡಿತ ಇಲ್ಲ. ಆದಾಗ್ಯೂ ಹೆಚ್ಚಿನ ಬೇಡಿಕೆ ಇದ್ದು, ಅದನ್ನು ನೀಗಿಸಲು ಪ್ರತ್ಯೇಕವಾಗಿ ಕೇಂದ್ರ ಸರ್ಕಾರಕ್ಕೆ ಟೆಲೆಕ್ಸ್ ಮೂಲಕ ಮನವಿ ಮಾಡಿ 500 ಕೆ. ಎಲ್. ಹೆಚ್ಚುವರಿ ಡೀಸಲ್‌ನ್ನು ನೀಡುವಂತೆ ಬೇಡಿಕೆ ಸಲ್ಲಿಸಿದೆ.

ಈಗಾಗಲೇ ಸದನದಲ್ಲಿ ರಾಜ್ಯದಲ್ಲಿರುವ ಡೀಸಲ್ ಮತ್ತು ಪೆಟ್ರೋಲ್ ಸರಬರಾಜು ವಿತರಣೆ ಬಗ್ಗೆ ವಿವರವಾದ ಮಾಹಿತಿ ಒದಗಿಸಿರುದು ತಮಗೆ ತಿಳಿದಿದೆ.

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆಯಾ ಜಿಲ್ಲೆಗಳಲ್ಲಿ ಸೀಮೆಎಣ್ಣೆ ಹಾಗೂ ಡೀಸಲ್ ವಿತರಣೆಯ ಬಗ್ಗೆ ಶಾಸನಬದ್ಧ ಎಲ್ಲಾ ಕ್ರಮಗಳನ್ನು ಜರುಗಿಸಿ ವ್ಯವಸ್ಥಿತ ರೀತಿಯಲ್ಲಿ ವಿತರಣೆಯಾಗುವಂತೆ ನೋಡಿಕೊಳ್ಳಲು ಆದೇಶ ನೀಡಿದೆ. ಜಿಲ್ಲಾಧಿಕಾರಿಗಳಿಂದ ವರದಿಗಳು ಬರುತ್ತಿದ್ದು ವಿತರಣೆ ಸಮರ್ಪಕವಾಗಿ ನಡೆಯುವ ವ್ಯವಸ್ಥೆ ಮಾಡಿರುವುದಾಗಿ ಹಾಗೂ ವಿತರಣೆಯಲ್ಲಿ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ ಎಂದು ತಿಳಿಸಿದ್ದಾರೆ. ವಿತರಣಾ ವ್ಯವಸ್ಥೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸರ್ಕಾರವು ಎಲ್ಲಾ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು.

ಅನುಬಂಧ

ಪ್ರತಿ ತಿಂಗಳು ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಒದಗಿಸುವ ಸೀಮೆಎಣ್ಣೆ ಪ್ರಮಾಣ.

| | | |
|---|---|---|
| ಜನವರಿ | 1990 | 50,905 ಕೆ. ಎಲ್. |
| ಫೆಬ್ರುವರಿ | 1990 | 50,905 ಕೆ. ಎಲ್. |
| ಮಾರ್ಚ್ | 1990 | 43,197 ಕೆ. ಎಲ್. |
| ಏಪ್ರಿಲ್ | 1990 | 44,018 ಕೆ. ಎಲ್. |
| ಮೇ | 1990 | 44. 18 ಕೆ. ಎಲ್. |
| ಜೂನ್ | 1990 | 44,018 ಕೆ. ಎಲ್. |
| ಜುಲೈ | 1990 | 45,795 ಕೆ. ಎಲ್. |
| ಆಗಸ್ಟ್ | 1990 | 45,795 ಕೆ. ಎಲ್. |
| ಸೆಪ್ಟೆಂಬರ್ | 1990 | 45,795 ಕೆ. ಎಲ್. |
| ಅಕ್ಟೋಬರ್ | 1990 | 45,795 ಕೆ. ಎಲ್. |
| ನವೆಂಬರ್ | 1990 | 45,940 ಕೆ. ಎಲ್. |

ಪ್ರತಿ ತಿಂಗಳು ರಾಜ್ಯದಲ್ಲಿ ಬಳಸುತ್ತಿರುವ ಡೀಸಲ್ ಪ್ರಮಾಣ

| | |
|---|---|
| 1989ರ ಏಪ್ರಿಲ್‌ನಿಂದ 1989ರ ಆಕ್ಟೋಬರ್ ತಿಂಗಳವರೆಗೆ | 5,57,673 ಮೆ.ಟನ್. |
| 1990ರ ಏಪ್ರಿಲ್‌ನಿಂದ 1990ರ ಆಕ್ಟೋಬರ್ ತಿಂಗಳವರೆಗೆ | 6,12,077 ಮೆ.ಟನ್. |
| ಹೆಚ್ಚುವರಿ | 54,404 ಮೆ.ಟನ್. |
| (ಶೇಕಡಾವಾರು ಬೆಳವಣಿಗೆ–9.8) | |
| ನವೆಂಬರ್ 1990 ರಲ್ಲಾದ ಬಳಕೆ | 76,015 ಮೆಟ್ರಿಕ್ ಟನ್. |
| ಡಿಸೆಂಬರ್ 1990ರಲ್ಲಿ ಒದಗಿಸಲಾದ ಪ್ರಮಾಣ | 87,562 ಮೆಟ್ರಿಕ್ ಟನ್. |
| ತಿಂಗಳ ಸರಾಸರಿ ಬಳಕೆಯ ಪ್ರಮಾಣ | 87,439 ಮೆಟ್ರಿಕ್ ಟನ್. |

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು) :– ಮಾನ್ಯ ಸದಸ್ಯರು ಹೇಳಿದ ಹಾಗೆ ಪರಿಸ್ಥಿತಿ ಗಂಭೀರವಾಗಿ ಏನೂ ಇಲ್ಲ. ಪರಿಸ್ಥಿತಿಯ ಬಗ್ಗೆ ಸರ್ಕಾರಕ್ಕೆ ಮನವರಿಕೆಯಾಗಿದೆ. ಈ ಅಧಿವೇಶನದ ಅವಧಿಯಲ್ಲೇ ನಾನು ದೆಹಲಿಗೆ ಹೋಗಿ ಸಂಬಂಧಪಟ್ಟ ಕೇಂದ್ರ ಮಂತ್ರಿಗಳೊಡನೆ ನಮ್ಮ ಬೇಡಿಕೆಯನ್ನು ಇಟ್ಟು ರಾಜ್ಯ ಸರ್ಕಾರಕ್ಕೆ ಸಲ್ಲಬೇಕಾದ ಹೆಚ್ಚುವರಿ ಬೇಡಿಕೆಯನ್ನು ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯಣಿಯವರಿಗೆ ಹಾಗೂ ಇತರ ಸದಸ್ಯರಿಗೆ ಹೇಳಬಯಸುತ್ತೇನೆ.

(2) ಬೆಂಗಳೂರು ನಗರ ಸಾರಿಗೆಯಲ್ಲಿ ಹೆಚ್ಚು ಪಿ. ಹೆಚ್. ಎಸ್. ಬಸ್ಸುಗಳನ್ನು ಕಛೇರಿಯ ವೇಳೆಗೆ ಓಡಿಸುವುದು.

ಶ್ರೀ ಬಿ. ಎಂ. ಇದಿನಬ್ಬ :– ಬೆಂಗಳೂರು ನಗರದಲ್ಲಿ ಸರಕಾರಿ ನೌಕರರು ಹೆಚ್ಚು ಮಂದಿ ಕಚೇರಿಗೆ ಹಾಜರಾಗಲು ಬೆಂಗಳೂರು ನಗರ ಸಾರಿಗೆಯನ್ನೇ ನಂಬಿರುವುದು ಸತ್ಯ ಸಂಗತಿ. ಈ ಹಿಂದೆ ಡೀಸೆಲ್ ಕೊರತೆಯಿಂದಾಗಿ ಅನೇಕ ಪಿ. ಹೆಚ್. ಎಸ್. ಬಸ್‌ಗಳನ್ನು ನಿಲ್ಲಿಸಿದ್ದು ಈಗಲೂ ಅವುಗಳನ್ನು ಓಡಿಸದೇ ಇರುವುದರಿಂದ ನೌಕರರಿಗೆ ಕಚೇರಿಗೆ ಸರಿಯಾದ ವೇಳೆಯಲ್ಲಿ ಹಾಜರಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ತೊಂದರೆಯಾಗಿದೆ. ಉದಾ : ವಿಜಯನಗರದ 4 ನೇ ಮೈನ್‌ನಿಂದ ಈ ಹಿಂದೆ 2 ಪಿ. ಹೆಚ್. ಎಸ್. ಬಸ್‌ಗಳನ್ನು ಓಡಿಸುತ್ತಿದ್ದು ಈಗ ಒಂದು ಬಸ್ ಮಾತ್ರ ಓಡಿಸುತ್ತಿದ್ದಾರೆ. ಇನ್ನೊಂದು ಬಸ್‌ನ ಜನರು ದಿನವೂ ಬಸ್‌ಗಾಗಿ ಪರದಾಡುತ್ತಿದ್ದಾರೆ. ಹೀಗೆ ನಗರದಲ್ಲಿ ಅನೇಕ ಕಡೆಗಳಲ್ಲಿ ಪಿ. ಹೆಚ್. ಎಸ್. ಬಸ್‌ಗಳಿಲ್ಲದೆ ನೌಕರರಿಗೆ ತೊಂದರೆಯಾಗಿರುತ್ತದೆ. ಆದುದರಿಂದ ಪಿ. ಹೆಚ್. ಎಸ್. ಬಸ್‌ಗಳನ್ನು ಸಾಕಷ್ಟು ಓಡಿಸಲು ಶೀಘ್ರ ಕ್ರಮ ಕೈಗೊಂಡು ನೌಕರರು ಕಚೇರಿಗಳಿಗೆ ಸರಿಯಾಗಿ ಹಾಜರಾಗಲು ಅನುಕೂಲ ಮಾಡಿಕೊಡಬೇಕಾಗಿ ಮಾನ್ಯ ಸಾರಿಗ ಮತ್ತು ವಕ್ಫ್ ಮಂತ್ರಿಯವರ ಗಮನ ಸೆಳೆಯುತ್ತೇನೆ. ಉದಾ: 2 ಕುಮಾರಸ್ವಾಮಿ ಬಡಾವಣೆಯಿಂದ ಬೆಳಿಗ್ಗೆ ಮತ್ತು ಸಾಯಂಕಾಲ ಪಿ. ಹೆಚ್. ಎಸ್. ಬಸ್ಸಿನ ಸೌಲಭ್ಯವನ್ನು ಒದಗಿಸಬೇಕಾಗಿ ಕೋರುತ್ತೇನೆ.

1-20 P. M.

Sri Azeez Sait (Minister for Transport) :– Sir, I would like to make the following statement in response to the matter raised by Sri B. M. Idinabba, the Hon'ble member of this House.

B. T. S. Division of the K. S. R. T. C. had suspended 194 schedules to match the cut in the supply of HSD oil imposed by the Government of India. P. H. S. –19 and PHS 54 are the two schedule among them out of 194 schedules which were curtailed, 144 schedules have already been restored in view of the improvement in the HSD. oil supplies. It has now been decided to restore PHS–54 with effect from 20–12–1990 and with which the office goers will be facilitated with two trips (M. S. Buildings, Vidhana-Soudha etc.) i. e., at 9–25 hrs. (Route No. 63) and at 9–30 hrs. (PHS–54). The KSRTC has not withdrawn any other PHS, schedules to match the short supply of HSD. oil.

The K.S.R.T.C. has provided one trip from Kumaraswamy Layout to Bangalore Bus Station via Vidhna Soudha at 9–30 hrs. Similarly, one trip has been provided from Mathikere via Vidhana Soudha departing at 17–30 hrs. These two trips are adequately meeting the demand,. In view of this, providing additional trips from Kumaraswamy Layout at Office hours is not immediately warranted.